4. ವರದಿಗಳನ್ನೊಪ್ಪಿಸುವುದು

1) ಶ್ರೀ ಎನ್. ಚಿಕ್ಕೇಗೌಡ (ಅಧ್ಯಕ್ಷರು, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖಾ ವಿಷಯ ಸಮಿತಿ) : ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ ವಿಷಯ ಸಮಿತಿಯ ಪ್ರಥಮ ಎರಡು ವರದಿಗಳನ್ನೊಪ್ಪಿಸುತ್ತಿದ್ದೇನೆ.

2) ಶ್ರೀ ಡಿ.ಬಿ. ಚಂದ್ರೇಗೌಡ (ಅಧ್ಯಕ್ಷರು, ಇಂಧನ ವಿಷಯ ಸಮಿತಿ) : ಇಂಧನ ಇಲಾಖಾ ವಿಷಯ ಸಮಿತಿಯ ಮೊದಲನೆ ವರದಿಯನ್ನೊಪ್ಪಿಸುತ್ತಿದ್ದೇನೆ.

3) ಶ್ರೀ ಸಾದತ್ ಅಲಿ ಖಾನ್ (ಅಧ್ಯಕ್ಷರು, ಆರ್ಥಿಕ, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ ಮತ್ತು ಯೋಜನಾ ಇಲಾಖೆಗಳ ವಿಷಯ ಸಮಿತಿ): ಆರ್ಥಿಕ, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ ಮತ್ತು ಯೋಜನಾ ಇಲಾಖೆಗಳ ವಿಷಯ ಸಮಿತಿಯ ಮೊದಲನೆ ವರದಿಯನ್ನೊಪ್ಪಿಸುತ್ತಿದ್ದೇನೆ.

4) ಶ್ರೀ ಜಿ. ರಾಮಕೃಷ್ಣ (ಅಧ್ಯಕ್ಷರು, ಒಳಾಡಳಿತ, ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳ ವಿಷಯ ಸಮಿತಿ) : ಒಳಾಡಳಿತ, ಸಾರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳ ವಿಷಯ ಸಮಿತಿಯ ಮೊದಲನೆ ವರದಿಯನ್ನೊಪ್ಪಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ವಾರ್ತಾ ಮತ್ತು ಪ್ರಚಾರ ಇಲಾಖೆ, ಪ್ರವಾಸೋದ್ಯಮ ಯುವಜನಸೇವೆ, ಕನ್ನಡ ಮತ್ತ ಸಂಸ್ಕೃತಿ, ರಾಷ್ಟ್ರೀಯ ಸೇವಾ ನಿರ್ದೇಶನಾಲಯ, ಸರ್ಕಾರಿ ವಿಮಾನ ಹಾರಾಟ ತರಬೇತಿ ಆಲಯ, ಕರ್ನಾಟಕ ಗೆಜೆಟಿಯರ್, ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮ, ಕಂಠೀರವ ಸ್ಟುಡಿಯೋ, ಕರ್ನಾಟಕ ಪತ್ರಾಗಾರ, ಕರ್ನಾಟಕ ಪ್ರಾಚ್ಯವಸು ನಿರ್ದೇಶನಾಲಯ ಮತ್ತು ಕರ್ನಾಟಕ ಪ್ರವಾಸೋದ್ಯಮ ನಿಗಮದ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಎ.ಬಿ. ಜಕನೂರ್ : ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ವಿಷಯ ಸಮಿತಿಯ 1994-95ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮೊದಲನೇ ವರದಿಯನ್ನು ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಎಸ್. ಪ್ರಭಾಕರ ರಾಣಿಯವರ ಪರವಾಗಿ ಅಧ್ಯಕ್ಷರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಮಿತಿಯ ವರದಿಯನ್ನು ಸದನದ ಮುಂದೆ ನಾನು ಇಡುತ್ತಿದ್ದೇನೆ.

ಶ್ರೀ ಕೆ.ಪಿ. ಪ್ರಭುಕುಮಾರ್ : ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಿಗೆ ಸಂಬಂಧಿಸಿದ ವಿಧಾನಮಂಡಲದ ವಿಷಯ ಸಮಿತಿಯ ಮೊದಲನೆ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಎಸ್.ಎಚ್. ಕೌಜಲಗಿ : ಅಧ್ಯಕ್ಷರೇ, ವಾಣಿಜ್ಯ ಮತ್ತು ಕೈಗಾರಿಕೆ ವಿಷಯ ಸಮಿತಿಯ ಪ್ರಥಮ 6 ವರದಿಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗಾರಾಜ್ : (ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರ ಪರವಾಗಿ) : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವರದಿಯನ್ನು ಸಭೆಗೆ ಮಂಡಿಸುತ್ತಿದ್ದೇನೆ.

ವರದಿಗಳನ್ನು ಸಭೆಯ ಮುಂದಿಡುವುದು.

ಶ್ರೀ ಕೆ. ಲಕ್ಷ್ಮಣ್ಣ : ಮಾನ್ಯ ಅಧ್ಯಕ್ಷರೇ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಶ್ರೀ ಜಿ.ಎಸ್.ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ಶಿಕ್ಷಣ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ವಿಷಯ ಸಮಿತಿಯ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಶ್ರೀ ಎಂ. ಮಹಾದೇವ್ : ಮಾನ್ಯ ಅಧ್ಯಕ್ಷರೇ, ಕಂದಾಯ, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಗಳ ವಿಷಯ ಸಮಿತಿ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎ.ಎಸ್. ನಾಡಗೌಡ :ಅಧ್ಯಕ್ಷರೇ, ಕರ್ನಾಟಕ ವಿಧಾನಮಂಡಲದ ಸಮಾಜಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ವಿಷಯ ಸಮಿತಿಯ 1994-95ನೇ ಸಾಲಿನ ಅನುದಾನ ಬೇಡಿಕೆಗಳ ಮೊದಲನೇ ವರದಿಯನ್ನು ಸಮಿತಿಯ ಪಠವಾಗಿ ಸಭೆಯ ಮುಂದಿಡುತ್ತೇನೆ.

ಡಾ|| ಎನ್.ಬಿ. ನಂಜಪ್ಪ : ಮಾನ್ಯ ಅಧ್ಯಕ್ಷರೆ, ಅರ್ಥ ಇಲಾಖೆಯ ವಿಷಯ ಸಮಿತಿಯ 1994-95ನೇ ಸಾಲಿನ ಅನುದಾನ ಬೇಡಿಕೆಗಳ ಮೊದಲನೇ ವರದಿಯನ್ನು ಸಮಿತಿ ಪರವಾಗಿ ಮಂಡಿಸುತ್ತೇನೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿನ ಭೀಕರ ಬರಗಾಲ ಮತ್ತು ಅತಿವೃಷ್ಟಿ ಬಗ್ಗೆ

+ ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ನಾವು ಎರಡು ನಿಲುವಳಿ ಸೂಚನೆ ಕಳಿಸಿದ್ದೇವೆ. ಒಂದು, ರಾಜ್ಯದಲ್ಲಿ ಏನು ಭೀಕರವಾದ ಬರಗಾಲ ಅತಿವೃಷ್ಟಿ ಏನಾಗಿದೆ ಅದರಿಂದ ರಾಜ್ಯದ ರೈತರು ಸಂಪೂರ್ಣವಾಗಿ ಕಂಗಾಲಾಗಿದ್ದಾರೆ, 1989ರ ಇಸವಿಯಲ್ಲಿ ಸತತವಾಗಿ ಅತಿವೃಷ್ಟಿ ಮತ್ತು ಬರಗಾಲದಿಂದ ರೈತರು ಕಂಗಾಲಾಗಿದ್ದಾರೆ. ಸರ್ಕಾರ ರೈತರಿಗೆ ಯಾವುದೂ ಸಹಾಯ ಮಾಡಿಲ್ಲ, ಸಂಪೂರ್ಣ ವಿಫಲವಾಗಿದೆ. ಅದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಇದು ಬಹಳ ಮಹತ್ವದ ಜ್ವಲಂತ ಸಮಸ್ಯೆ, ಅದನ್ನು ಪ್ರಯಾರಿಟಿ ಮೇಲೆ ಚರ್ಚೆ ಮಾಡಬೇಕೆಂದು ಕೊಟ್ಟಿದ್ದೇವೆ. ಅದೇ ಪ್ರಕಾರ ಎರಡನೆಯದು, ಇತ್ತೀಚೆಗೆ ಹುಬ್ಬಳ್ಳಿಯ ವಿವಾದಿತ ಸ್ಥಳದಲ್ಲಿ ಆಗಸ್ಟ್ 15ರಂದು ಒಂದು ರಾಷ್ಟ್ರೀಯ ಪಕ್ಷ ಮತ್ತು ಅದರ ಅಂಗಸಂಸ್ಥೆಗಳು ರಾಷ್ಟ್ರಧ್ವಜ ಹಾರಿಸಲು ಹೊರಟಾಗ ಹುಬ್ಬಳ್ಳಿ ನಗರದಲ್ಲಿ ಉಂಟಾದ ವಾತಾವರಣದಿಂದ ಪೋಲೀಸ್ ಫೈರಿಂಗಾಗಿ 6 ಜನ ಅಮಾಯಕರು.... ಹಾಗಾಗಿ ಆಗಸ್ಟ್ 15 ಒಂದು ಹಬ್ಬದ ದಿನ. ಪ್ರತಿ ಭಾರತೀಯರೂ ಆ ಹಬ್ಬ ಆಚರಿಸಬೇಕು, ಆದರೆ ದುರ್ದೈವದಿಂದ.....

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವೂ ಇದರ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೆವು. ನಿನ್ನೆ ಮಾತುಕತೆ ಆದಂತೆ, ದಯಮಾಡಿ ರೂಲ್ಸ್ ಪ್ರಕಾರ ತಾವು ಕೂಡಲೇ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕಾಗುತ್ತದೆ, ಅದಕ್ಕೆ ಸದನದ ಅಭಿಪ್ರಾಯ ಕೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ದೇಶಪಾಂಡೆಯವರೇ, ಈ ಸದನ ಕರೆಯುವ ಬಗ್ಗೆ ಸಂಸದೀಯ ಸಚಿವರು ಏನೋ ಹೇಳಿಕೆ ಕೊಡುವ ಉತ್ಸಾಹದಲ್ಲಿದ್ದರು. ಆದಾದನಂತರ ಇದನ್ನು ತಗೊಳ್ಳಿ ಅಂತ. ಸದನವನ್ನು ಯಾವಾಗ ಕರೆಯಬೇಕು ಎಂದು ಸಂಪ್ರದಾಯ ಬೇಕಲ್ಲ, ಅವರಿಚ್ಛೆ ಬಂದ ಹಾಗೆ ಸದನ ಕರೆಯುವುದಲ್ಲ. ಆದ್ದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ, ಸರ್ಕಾರದ ನಿಲುವೇನು, ತಮ್ಮ ನಿಲುವೇನು, ಈ ಸದನವನ್ನು ಯಾವ ಘಳಿಗೆಯಲ್ಲಿ ಕರೆಯಬೇಕು ಎಂದು ವಿಚಾರ ಆಗಬೇಕಲ್ಲ. ದೇಶಪಾಂಡೆಯವರೇ ಇದರಲ್ಲಿ ನೀವೂ ಭಾಗಿಯಾಗಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಕೇಳಿ, ರೂಲ್ಸ್‌ಗ್ಯುಲೇಶನ್ ಹೇಳುತ್ತೇನೆ, ಒಮ್ಮೆ ನಾವು ಪೇಪರ್ಸನ್ನು ಲೇಡ್ ಮಾಡಿದ ಮೇಲೆ ನಿಲುವಳಿ ಸೂಚನೆ ಪ್ರಸ್ತಾಪ